ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಸ್ತ್ರೀ ಚಿನ್ನದ ಆಭರಣಗಳನ್ನು ಬಯಸುವಳು. ಆದರೆ ಸೀತೆ ಚಿನ್ನದ ಜಿಂಕೆಗೆ ಆಸೆ ಪಟ್ಟದ್ದೆಷ್ಟು ಸರಿ?



ಸ್ಥಾನಕ್ಕೆ ತಕ್ಕ ಆಸೆಯದು. ಸೀತೆ ಇದ್ದದ್ದು ವನದಲ್ಲಿ. ವನಕ್ಕೆ ಜಿಂಕೆಯೇ ಆಭರಣ!

ಬಿ. ಚಂದ್ರೇಗೌಡ, ಬೆಂಗಳೂರು

ಮಂದಿಗೂ, ಮಂದಿರಕ್ಕೂ ಏನು ಸಂಬಂಧ?

ಕೃತಿಯೇ; ಮಂದಿರದ ಆಕೃತಿ ಇವರ ಸುಕೃತಿಗಳಿಗೆ ಪ್ರೇರಕ, ಅ–ವಿಕೃತಿಯ ಬೋಧಕ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ವೃದ್ಧಾಪ್ಯಂ ಅದ್ಭುತಾನುಭವಾಮೃತ ಸಾಗರಂ ಅಂತಾರಲ್ಲಾ, ನಿಜವೇ?

ಹೂಂ. ಮೃತರಾಗುವ ತನಕ ಮಾತ್ರೆಯ ಗುಡ್ಡ, ಔಷಧಿಯ ಸಾಗರಗಳ ಅನುಭವ ಆಗುತ್ತಲ್ಲ.

ಉಷಾಲಕ್ಷ್ಮಿ ಅರವಿಂದ ಹೊಳ್ಳ, ಬೆಂಗಳೂರು

ಧೂಮಪಾನ ಹಾನಿಕರವೆಂದು ತಿಳಿದಿದ್ದರೂ ಯುವಜನತೆಗೆ ಸಿಗರೇಟಿನ ಆಕರ್ಷಣೆ ಏಕೆ?



‘ನಾನೂ ಒಂದು ದಿನ ಹೊಗೆಯಾಗುವೆನೆಂದು ನೆನಪಿಸಲು’ ಎಂದ ಕೈಲಾಸಂ ಚಾಳಿಯೇ ಕಾರಣವಂತೆ.

ಪಿ. ಜಯವಂತ ಪೈ, ಕುಂದಾಪುರ

ಪ್ರೇತವಿವಾಹಕ್ಕೂ, ಪ್ರೇಮವಿವಾಹಕ್ಕೂ ವ್ಯತ್ಯಾಸವೇನು?

ಪ್ರೇತವಿವಾಹಕ್ಕೆ ಪುರೋಹಿತರೇ ಆಪೋಶನ ಆಗುವ ಸಾಧ್ಯತೆಯಿದೆ.

ಮಾಲತೇಶ ಪಾಟೀಲ, ಹುಬ್ಬಳ್ಳಿ

ಶಿವರಾತ್ರಿಗೂ, ನವರಾತ್ರಿಗೂ ಏನು ವ್ಯತ್ಯಾಸ?

ಇದು ಬೇಡದ ಬೇಡನ ಭಕ್ತಿಯ ಆಚರಣೆ; ಅದು ಬೇಡವಾದವನ ವಧೆಯ ಸಂಭ್ರಮ.

ಆಶಾ ಅಪ್ರಮೇಯ, ದಾವಣಗೆರೆ

ಈಗಿನ ಆಮಂತ್ರಣಪತ್ರದ ಹೆಸರಿನ ಸ್ಥಳದಲ್ಲಿ ‘ನಿಮ್ಮ ಹೆಸರು ನಮ್ಮ ಮನದಲ್ಲಿದೆ’ ಎಂದಿರುತ್ತಲ್ಲ?

ಬರೆಯುವಾಗ ಷಣ್ಮುಗವು ಸಣ್ಮೊಗ, ಕಮಲೆಯು ಕಾಮಾಲೆ, ಇತ್ಯಾದಿ ಆದೀತೆಂಬ ಭಯವಂತೆ.

ಅನಸೂಯ ಟಿ, ಕೇದಿಗೆಮನೆ

ವೃದ್ಧಾಪ್ಯದಲ್ಲಿ ಪ್ರಾಣಿಗಳು ತಮ್ಮ ಮಕ್ಕಳು ತಮ್ಮನ್ನು ನೋಡಿಕೊಳ್ಳಬೇಕೆಂದೇಕೆ ಬಯಸುವುದಿಲ್ಲ?

ಮನುಷ್ಯರು ನೋಡಿಕೊಳ್ಳುವ ರೀತಿಯನ್ನು ಕಂಡು ಸೆಲ್ಫ್ ಹೆಲ್ಪೇ ಬೆಸ್ಟೆಂದು ಅರಿತಿವೆ.

ಜಾನಿ

ಸಮಾಜ ಯಾಕೋ ‘ಅಂತರಂಗ ರದ್ದಿ; ಬಹಿರಂಗ ಲದ್ದಿ’ ಆಗ್ತೈತಲ್ಲ ಸಾರ್?

‘ನಾವು’ ಅಂದ್ರೆ ನೋವು, ‘ನಾನು’ ಅಂದ್ರೆ ಜೇನು ಅನ್ನೋ ಬುದ್ಧೀನೇ ಕಾರಣ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಬುದ್ಧಿಯ ಜ್ಞಾನಕ್ಕೂ, ಹೃದಯದ ಜ್ಞಾನಕ್ಕೂ ವ್ಯತ್ಯಾಸ?

ಅದಕ್ಕೆ ಪ್ರೀತಿ ಗೊತ್ತಿಲ್ಲ, ಇದಕ್ಕೆ ವಿವೇಕ ಗೊತ್ತಿಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು

ಕೆಲವರು ಬಕೆಟ್ ಹಿಡಿದ ಅಂತಾರೆ. ಅದು ಸ್ಟೀಲ್‌ದೋ, ಪ್ಲಾಸ್ಟಿಕ್‌ದೋ?

ಸ್ವಂತದ್ದೇಕೆ ಹಿಡಿದಾರು, ಅದು ಸ್ಟೀಲ್‌ದೇ (ಕದ್ದದ್ದು) ಆಗಿರುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಬೋಳುತಲೆಯವರು ಸಹ ಜೇಬಿನಲ್ಲಿ ಬಾಚಣಿಗೆ ಇಟ್ಟುಕೊಳ್ಳುವ ಉದ್ದೇಶ?

ತುದಿಯಿಂದ ತಲೆ ಕೆರೆದುಕೊಳ್ಳಲು, ಉಗುರು ಸ್ವಚ್ಛಗೊಳಿಸಿಕೊಳ್ಳಲು.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ಕೆಲ ರಾಜಕಾರಣಿಗಳು ಶುದ್ಧರಾಗುವುದು ಅಂತರಂಗ ಶುದ್ಧಿಯಿಂದಲೋ, ಬಹಿರಂಗ ಶುದ್ಧಿಯಿಂದಲೊ?

ರೈಡಿನ ಭಯದಿಂದ, ಗದ್ದುಗೆಯ ಆಸೆಯಿಂದ. ನಂತರ ಯಥಾ ಕೊಳಕೇ.

## ಬಹುಮಾನಿತ ಪ್ರಶ್ನೆ

ರಾಜೀವ್ ಎನ್. ಮಾಗಲ್, ಸಕಲೇಶಪುರ

ಫೀಲ್ಡಿಗೆ ಇಳಿಯುವಾಗ ಭೂಮಿಗೆ ನಮಿಸಿ ಸೆಂಚುರಿ ಬಾರಿಸಿದಾಗ ಆಕಾಶ ನೋಡುವುದೇಕೆ?

ಕ್ರಮವಾಗಿ ‘ಜಾರಿಸಿ ರನೌಟ್ ಮಾಡಿಸ್ಬೇಡ’, ‘ನಾನೂ ಸ್ಟಾರ್ ಆದೆ’ ಎನ್ನಲು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಕೂಲಿಗೂ, ಸಂಬಳಕ್ಕೂ ಇರುವ ವ್ಯತ್ಯಾಸವೇನು?

ಕರ್ಮಿಗೆ ಕೂಡಲೆ ಲಿಪ್ತವಾಗುವುದು ಕೂಲಿ; some ಕಾಲಾನಂತರ ಬಳಸಲು ಸಿಗುವುದು ಸಂಬಳ.

ಎಸ್.ಆರ್. ತಿಮ್ಮರಾಜು, ದಾವಣಗೆರೆ

ನರಗಳನ್ನು ಗಟ್ಟಿಗೊಳಿಸಲು ಉಪವಾಸ ಮಾಡುತ್ತೇನೆಂದರು ಗಾಂಧೀಜಿ. ಈಗ ಏನು ಮಾಡಬೇಕು?

ಗಾಂಧೀಜಿಯ ವಿರುದ್ಧ ಅರಚುವವರನ್ನು ಹತ್ತಿಕ್ಕಲು ವನವಾಸ ಪಡಬೇಕು.

ಜಗದೀಶ ಬಿ. ಹೊಸೂರು, ಮೈಸೂರು

ರಂಗಭೂಮಿಯ ನಟರಿಗೂ, ಸಿನಿಮಾ ನಟರಿಗೂ ಇರುವ ವ್ಯತ್ಯಾಸವೇನು?



ರಂಗಭೂಮಿಯವರದು ರೀಟೇಕ್, ಎಡಿಟಿಂಗ್ ಇಲ್ಲದ ನಿತ್ಯ ಅಗ್ನಿಪರೀಕ್ಷೆ.

ಸಿಹಿಮೊಗೆ ರಮೇಶ್, ಮೈಸೂರು

ಬದುಕಿದ್ದಾಗ ಉಳಿಯುವುದು ಏನು? ಸತ್ತ ನಂತರ ಉಳಿಯುವುದು ಏನು?

ರಸೀತಿ, ಫಜೀತಿ.

ಜಯಶ್ರೀ, ಬೆಂಗಳೂರು

ಧಾರಾವಾಹಿಗಳಲ್ಲಿ ಖಳನಾಯಕರಿಗಿಂತ ಖಳನಾಯಕಿಯರೇ ಹೆಚ್ಚಾಗಿರುತ್ತಾರಲ್ಲ, ಏಕೆ?

ಕೋಪಗೊಂಡ ಹೆಣ್ಣಿನ ಸೌಂದರ್ಯಕ್ಕೆ ಮರುಳಾಗುವ ವೀಕ್ಷಕರೇ ಹೆಚ್ಚು ಇರುವುದರಿಂದ.

■ ರಾಮ್